# ಮಕ್ಕಳಿಗಾಗಿ ಬೈಬಲ್

ಅರ್ಪಿಸುವ



# ಎಲೀಷ, ಅದ್ಭುತಕಾರ್ಯಗಳ ಮನುಷ್ಯ


ಬರಹಗಾರರು: Edward Hughes
ಚಿತ್ರಲೇಖಕರು: Lazarus; Alastair Paterson
ಅಳವಡಿಸುವವರು: Ruth Klassen
ಪದ್ಮಾ ಸೈಲೇಸ್: Vinay Shirol



ತಯಾರಕರು: Bible for Children
www.M1914.org

BFC
PO Box 3
Winnipeg, MB R3C 2G1
Canada



©2021 Bible for Children, Inc.
ಅನುಮತಿ: ಈ ಕಥೆಯನ್ನು ಉಪಯೋಗಿಸುವದಕ್ಕೆ ಮತ್ತು ಮುದ್ರಣಹಾಕುವದಕ್ಕೆ ನಿಮಗೆ ಅನುಮತಿ ಇರುವದು. ಆದರೆ, ಇದನ್ನು ನೀವು ಯಾವ ಕಾರಣಕ್ಕಾಗಿಯೂ ಮಾರಾಟಮಾಡಬಾರದು.




ನೇಗಿಲನ್ನು ಎಳೆಯಲು ಸಾಕಾಗುವಷ್ಟು ಎತ್ತುಗಳು ಇರಲಿಲ್ಲ, ಇನ್ನೂ ಒಂದು ಬೇಕಾಗಿತ್ತು ಆದರೆ ಯವನಸ್ಥ ರೈತನಾದ ಎಲೀಷನನ್ನು ಇದು ನಿಲ್ಲಿಸಲಿಲ್ಲಾ. ಅವನು ಎತ್ತಿನ ಜೋತೆ ಕೊಡಿ ಇಲ್ಲದೆ ಇರುವ ಎತ್ತಿನ ಜಾಗವನ್ನು ತೆಗೆದುಕೊಂಡನು. ಬಹುಶಃ ಅವನು ಬಲಶಾಲಿ, ಜಾಣ ಹಾಗೂ ಕಷ್ಟಪಟ್ಟು ದುಡಿಯುವ ಮನುಷ್ಯನಾಗಿರಬಹುದು.





ಎಲೀಷನು ಉಳುತ್ತಿರುವಾಗ, ದೇವರ ಪ್ರವಾದಿಯಾದ ಎಲೀಯನು ಬಂದು ಅವನನ್ನು ಕರೆದನು, ದೇವರ ಸೇವಕನಾಗಲು ತನ್ನ ಹೋಲವನ್ನು ಬಿಟ್ಟು ಬಂದನು. ಒಂದು ದಿನ ದೇವರು ಎಲೀಯನ್ನು ಸುಳಿಗಾಳಿಯ ಮುಖಾಂತರ ಪರಲೋಕಕ್ಕೆ ಸೇರಿಸಿಕೊಂಡನು, ಆಗ ಇಸ್ರಾಯೇಲ್ಯರಿಗೆ ಎಲೀಷನು ದೇವರ ಪ್ರವಾದಿಯಾದನು.

3



ಎಲೀಯನು ಹೋದನೆಂದು ದು:ಖಿತನಾದ ಎಲೀಷನು, ಎಲೀಯನಂತೆ ತನಗೆ ದೇವರು ಶಕ್ತಿಯನ್ನು ಕೊಡುವನು ಎಂದು ದೇವರಲ್ಲಿ ಪ್ರಾರ್ಥಿಸುತ್ತಿದ್ದನು.

4



ಎಲೀಷನು ಎಲೀಯನ ಕಂಬಳಿಯನ್ನು ತೆಗೆದುಕೊಂಡು ಹರಿಯುವ ನದಿಯ ನೀರನ್ನು ಹೊಡೆಯಲು ನೀರು ಎರಡು ಭಾಗವಾಯಿತು!

ಆಗ ಎಲೀಷನಿಗೆ ದೇವರು ತನ್ನ ಜೋತೆಗೆ ಇದ್ದಾನೆಂದು ತಿಳಿದುಕೊಂಡನು.

5



ಎಲೀಷನು ಬೇತೆಲ ಎಂಬ ಪಟ್ಟಣಕ್ಕೆ ಹೋಗುತ್ತಿರುವಾಗ ಕೇಲವು ಹುಡುಗರು "ಬೋಳತಲೆಯವನೇ, ಏರು" ಎಂದು ಕೂಗಿ ಪರಿಹಾಸ್ಯ ಮಾಡಿದರು. ಎಲೀಷನು ದೇವರ ಮನುಷ್ಯನೆಂದು ಯೋಚಿಸಲಿಲ್ಲ ಒಂದು ಆಶ್ಚರ್ಯವಾದ ಸಂಗತಿ ನಡೆಯಿತು, ಕೂಡಲೆ ಕಾಡಿನಿಂದ ಎರಡು ಹೆಣ್ಣು ಕರಡಿಗಳು ಬಂದು ಆ ನಾಲ್ವತ್ತೆರಡು ಯವನಸ್ಥರನ್ನು ಹರಿದು ಬಿಟ್ಟವು.

6

ಒಂದು ದಿನ ಎಲೀಷನು ವಿಧವೆಯನ್ನು ಭೇಟಿಮಾಡಿದನು, ಆಕೆಯು ತೆಗೆದುಕೊಂಡಂತ ಹಣವನ್ನು ಹಿಂತಿರುಗಿಸಲಾಗಲಿಲ್ಲ. ಸಾಲ ಕೊಟ್ಟವನು ತನ್ನ ಹಣವನ್ನು ತೆಗೆದುಕೊಳ್ಳಲು ವಿಧವೆಯ ಇಬ್ಬರು ಮಕ್ಕಳನ್ನು ದಾಸರನಾಗಿ ತೆಗೆದುಕೊಳ್ಳಲು ಬಂದನು. "ಈಗ ಹೋಗಿ ನೀನ್ನ ನೆರೆಯವರಿಂದ ಸಿಕ್ಕುವಷ್ಟು ಬರೀ ಪಾತ್ರೆಗಳನ್ನು ಕೇಳಿಕೊಂಡ ಬಾ" ಎಂದು ಎಲೀಷ ಹೇಳಿದನು. ದೇವರು ಆಕೆಗೆ ಒಂದು ಅದ್ಭುತಕಾರ್ಯ ಮಾಡಲು ಹೋರಟನು.



7

ವಿಧೆವೆಯ ಮನೆಯಲ್ಲಿ ಒಂದು ಚಿಕ್ಕ ಮೊಗೆ ಎಣ್ಣೆ ಮಾತ್ರ ಇತ್ತು. ಆದರೆ ಆ ಚಿಕ್ಕ ಮೊಗೆ ಎಣ್ಣೆಯಿಂದ ಆಕೆ ಎಲ್ಲ ಪಾತ್ರೆಯನ್ನು ತುಂಬಿಸಿದಳು. ಅ ಕಾಲದಲ್ಲಿ ಸ್ನಾನ ಮಾಡಲು ಬಳಸುವ ದೂಡ್ಡ ತೋಟ್ಟಿಯಿದ್ದಿದ್ದರೆ ಅವಗಳನ್ನು ಸಹ ದೇವರು ತುಂಬಿಸುತ್ತಿದ್ದರು. ಆ ಎಣ್ಣೆಯನ್ನು ಮಾರಿ ಆ ಸ್ತ್ರೀಯು ತನ್ನ ಮಕ್ಕಳನ್ನು ಕಾಪಾಡಿದಳು.



8

ಮತ್ತೊಬ್ಬ ಸ್ತ್ರಿಯು ಹಾಗೂ ಆಕೆಯ ಗಂಡನು ಎಲೀಷನಿಗೆ ಪ್ರತ್ಯಕವಾದ ಒಂದು ಕೋಣೆಯನ್ನು ಸಿದ್ಧಪಡಿಸಿದರು ಅವನು ಬಂದಾಗೆಲ್ಲಾ ಅದರಲ್ಲಿ ವಾಸಮಾಡಬಹುದು ಆ ಕೋಣೆಯಲ್ಲಿ ಅವರು ಒಂದು ಮಂಚ, ಮೇಜು, ಕುರ್ಚಿ ಮತ್ತು ದೀಪಸ್ತಂಬವನ್ನು ಇಟ್ಟರು ಆ ಕೋಣೆ ಎಲೀಷನಿಗೋಸ್ಕರವಾಗಿತ್ತು.



9

ಆ ದಂಪತಿಗಳು ಮಾಡಿದ ಉಪಕಾರಕ್ಕೆ ಪ್ರತ್ಯುಪಕಾರ ಏನು ಮಾಡಲಿ ಎಂದು ಎಲೀಷನು ಆಲೋಚಿಸುತ್ತಿದ್ದನು. ಅವರಿಗೆ ಮಕ್ಕಳಿಲ್ಲಾ ಎಂದು ತಿಳಿದಾಗ, "ನೀನು ಬರುವ ವರುಷ ಇದೇ ಕಾಲದಲ್ಲಿ ಒಬ್ಬ ಮಗನನ್ನು ಅಪ್ಪಿಕೊಂಡಿರುವೆ". ಎಂಬ ನಂಬಲಾರದ ಸಂಗತಿಯನ್ನು ಆಕೆಗೆ ಹೇಳಿದನು. ಅದರಂತೆ ಒಂದು ವರ್ಷದ ನಂತರ ಆಕೆಗೆ ಮಗು ಜನಿಸಿತು.



10

ಕೆಲವು ವರುಷಗಳ ನಂತರ ಅದೇ ಮಗು ತನ್ನ ತಂದೆಯ ಜೊತೆ ಹೊಲದಲ್ಲಿ ಇದ್ದನು. “ನನ್ನ ತಲೆ, ನನ್ನ ತಲೆ” ಎಂದು ಆ ಹುಡುಗ ಅತ್ತನು. ಅವರು ಹುಡುಗನನ್ನು ಅವನ ತಾಯಿಯ ಹತ್ತಿರ ತಂದಾಗ, ಹುಡುಗನು ಮಧ್ಯಾಹ್ನದವರೆಗೂ ತಾಯಿಯ ತೊಡೆಯ ಮೇಲೆಯೇ ಇದ್ದುಕೊಂಡು ಆ ನಂತರ ಸತ್ತನು. ಆಕೆಯು ಎಲೀಷನ ಕೋಣೆಯ ಮಂಚದ ಮೇಲೆ ಮಗನನ್ನು ಮಲಗಿಸಿದಳು. ಆಕೆಗೆ ಯಾರೂ ಸಹಾಯಮಾಡುವರೆಂದು ಯೋಚಿಸುತ್ತೀರಿ?



11

ನೀವು ಎಲೀಷ ಎಂದು ಹೇಳಿದ್ರಾ? ಅದು ಸರಿ! ಆಕೆ ಕತ್ತೆಗೆ ತಡಿ ಹಾಕಿಸಿ ವೇಗವಾಗಿ ಆತನನ್ನು ಹುಡುಕಲು ಹೊರಟಳು. ಎಲೀಷ ಆಕೆಯ ಮನೆಗೆ ಬಂದನು. ಏಕಾಂಗಿಯಾಗಿ ತನ್ನ ಕೋಣೆಗೆ ಹೋಗಿ ದೇವರನ್ನು ಪ್ರಾರ್ಥಿಸಿದನು. ದೇವರು ಹುಡುಗನನ್ನು ಉಜ್ಜೀವಿಸ ಮಾಡಿದರು. ಎಲೀಷ ಆ ಸ್ತ್ರೀಯನ್ನು ಕರೆದು "ನಿನ್ನ ಮಗನನ್ನು ತೆಗೆದುಕೋ" ಎಂದು ಹೇಳಿದನು. ಆಕೆ ಎಷ್ಟು ಸಂತೋಷಪಟ್ಟಿರಬಹುದು!



12

ಹತ್ತಿರದ ಪ್ರಾಂತ್ಯವಾದ ಸೀರಿಯಾ ಎಂಬಲ್ಲಿ ನಾಮಾನನೆಂಬ ಸೇನಾಪತಿ ಇದ್ದನು. ಅವನು ಧೈರ್ಯವಂತ ಹಾಗೂ ಬಲಶಾಲಿಯಾಗಿದ್ದನು. ಆದರೆ ಅವನಿಗೆ ಚರ್ಮಕ್ಕೆ ಸಂಬಂಧಪಟ್ಟ ಭಯಂಕರ ಕುಷ್ಠ ರೋಗವಿತ್ತು.



13

ಇಸ್ರಾಯೇಲರಿಂದ ಹಿಡಿದುಕೊಂಡು ಬಂದ ಚಿಕ್ಕ ಹುಡುಗಿ ನಾಮಾನನ ಹೆಂಡತಿಗೆ ದಾಸಿಯಾಗಿದ್ದಳು. ಈ ಚಿಕ್ಕ ಹುಡುಗಿ "ನಮ್ಮ ದಣಿಯು ಸಮಾರ್ಯದಲ್ಲಿರುವ ಪ್ರವಾದಿಯ ಹತ್ತಿರ ಇರುತ್ತಿದ್ದರೆ ಎಷ್ಟೋ ಒಳ್ಳೇದಾಗುತ್ತಿತ್ತು! ಅವನು ಇವನನ್ನು ಕುಷ್ಠರೋಗದಿಂದ ವಾಸಿ ಮಾಡುತ್ತಿದ್ದನು ಎಂದು ಹೇಳಿದಳು."



14

ಕೂಡಲೇ ನಾಮಾನನು ಆ ಪ್ರವಾದಿಯನ್ನು ನೋಡಲು ಹೊರಟನು. ಅವನು ಬೆಳ್ಳಿ, ಬಂಗಾರ ಹಾಗೂ ದುಸ್ತು ಬಟ್ಟೆಗಳನ್ನು ಕಾಣಿಕೆಯಾಗಿ ತೆಗೆದುಕೊಂಡು ಹೋದನು.



15



ಎಲೀಷನ ಸೇವಕನು ಹೊರಗೆ ಬಂದು, "ಹೋಗಿ ಯಾರ್ದಾನ ಹೊಳೆಯಲ್ಲಿ ಏಳು ಸಾರಿ ಸ್ನಾನ ಮಾಡು ಆಗ ನೀನು ಶುದ್ಧನಾಗುವಿ" ಎಂದು ಹೇಳಿದನು. ನಾಮಾನನು ಕೋಪಗೊಂಡನು. ಅವನ ಸ್ವಂತ ದೇಶವಾದ ಸೀರಿಯಾದ ನದಿಗಳಲ್ಲಿ ಸ್ನಾನ ಮಾಡಬಹುದಾಗಿತ್ತಲ್ಲವೋ? ಸಿಟ್ಟಿನಿಂದ ತಿರುಗಿ ಮನೆಯ ಕಡೆಗೆ ಹೊರಟನು.

16



ಅದೃಷ್ಟಕರವಾಗಿ ನಾಮಾನನೊಂದಿಗೆ ತನ್ನ ಸೇವಕರು ಎಲೀಷನ ಆಜ್ಞೆಯನ್ನು ಪಾಲಿಸುವಂತೆ ಮಾತನಾಡಿದರು. ಅದಕ್ಕೆ ನಾಮಾನನು ಯೊರ್ದಾನಿಗೆ ಹೋಗಿ ಏಳು ಸಾರಿ ಅದರಲ್ಲಿ ಮುಳುಗಿ ಎದ್ದನು. ಮತ್ತು ಅವನ ಕುಷ್ಠರೋಗವು ಶುದ್ಧವಾಯಿತು! ನಂತರ ನಾಮಾನನು ತನ್ನ ಕುಷ್ಠರೋಗವನ್ನು ವಾಸಿಮಾಡಿದಂತ ಎಲೀಷನ ದೇವರನ್ನು ನಿಜ ದೇವರೆಂದು ಆರಾಧಿಸಿದನು.

17



ದೇವರು ತನ್ನ ಸೇವಕನಾದ ಎಲೀಷನನ್ನು ಸತ್ತನಂತರವು ಸಹ ಉಪಯೋಗಿಸಿಕೊಂಡರು. ಬಹು ವರ್ಷಗಳ ಹಿಂದೆ ಎಲೀಷನನ್ನು ಸಮಾದಿ ಮಾಡಿದಂತ ಗುಹೆಯಲ್ಲಿ ಒಂದು ದಿವಸ ಒಬ್ಬ ಸತ್ತ ಮನುಷ್ಯನನ್ನು ಸಮಾದಿ ಮಾಡಿದರು. ಆ ಸತ್ತ ಮನುಷ್ಯನ ದೇಹವು ಪ್ರವಾದಿಯ ಎಲುಬುಗಳಿಗೆ ತಗುಲಿದ ಕೂಡಲೇ ಉಜ್ಜೀವಿಸಿ ಎದ್ದು ತನ್ನ ಕಾಲಿನ ಮೇಲೆ ನಿಂತನು. ನಿಜವಾಗಿಯೂ ನಂಬಿಗಸ್ತ ಸೇವಕನಾದ ಎಲೀಷನ ಮುಖಾಂತರ ದೇವರು ತನ್ನ ಮಹತ್‌ಕಾರ್ಯವನ್ನು ತೋರಿಸಿದನು.

18

ಎಲೀಷ, ಅದ್ಭುತಕಾರ್ಯಗಳ ಮನುಷ್ಯ

ದೇವರ ವಾಕ್ಯವಾದ ಬೈಬಲ್‌ನಿಂದ ಆರಿಸಿದ ಕಥೆ

ಸಿಕ್ಕುವ ಭಾಗ

**2 ಅರಸುಗಳು 2–13**

**"ನಿನ್ನ ವಾಕ್ಯವಿವರಣೆಯಿಂದ ಜ್ಞಾನೋದಯವಾಗುವದು."**
**ಕೀರ್ತನೆ 119:130**

19

# ಮುಕ್ತಾಯ

25 60

20

ಅದ್ಭುತನಾದ ದೇವರು ನಮ್ಮನ್ನು ಉಂಟು ಮಾಡಿರುವನೆಂದು ಮತ್ತು ನಾವು ಆತನನ್ನು ಕಂಡುಕೊಳ್ಳಬೇಕೆಂದು ದೇವರು ಇಷ್ಟಪಡುತ್ತಾನೆಂದು ಈ ಬೈಬಲ್ ಕಥೆಯು ತಿಳಿಸುತ್ತದೆ.

ನಾವು ಕೆಟ್ಟ ಕೆಲಸಗಳನ್ನು ಮಾಡಿರುವದು ದೇವರಿಗೆ ತಿಳಿದಿರುತ್ತದೆ. ಈ ಕೆಟ್ಟ ಕೆಲಸಗಳನ್ನು ದೇವರು ಪಾಪವೆಂದು ಕರೆಯುತ್ತಾನೆ. ಪಾಪದ ಶಿಕ್ಷೆಯು ಮರಣವಾಗಿದೆ. ಆದರೆ ನಮ್ಮ ಪಾಪದ ಶಿಕ್ಷೆಯನ್ನು ತನ್ನ ಮೇಲೆ ಹೊತ್ತುಕೊಂಡು ಶಿಲುಬೆಯ ಮೇಲೆ ಪ್ರಾಣ ಕೊಡಲು ದೇವರು ತನ್ನ ಒಬ್ಬನೇ ಮಗನಾದ ಯೇಸುಕ್ರಿಸ್ತನನ್ನು ಈ ಲೋಕಕ್ಕೆ ಕಳುಹಿಸಿಕೊಟ್ಟನು. ಯೇಸುಕ್ರಿಸ್ತನು ಸತ್ತವರೊಳಗಿಂದ ತಿರುಗಿ ಎದ್ದು ಬಂದು ಪರಲೋಕಕ್ಕೆ ಏರಿಹೋಗಿದ್ದಾನೆ. ನಿನ್ನ ಪಾಪದ ಶಿಕ್ಷೆಯನ್ನು ಯೇಸುಕ್ರಿಸ್ತನು ತೀರಿಸಿದ್ದಾನೆ. ಆತನು ನಿನ್ನ ಪಾಪಗಳನ್ನು ಕ್ಷಮಿಸುತ್ತಾನೆ. ಆದರೆ ನಿನ್ನ ಪಾಪಗಳನ್ನು ಕ್ಷಮಿಸಬೇಕೆಂದು ನೀನು ಆತನಿಗೆ ಕೇಳಿಕೊಳ್ಳಬೇಕು. ಆತನು ಖಂಡಿತವಾಗಿ ನಿನ್ನ ಪಾಪಗಳನ್ನು ಕ್ಷಮಿಸುವನು ಮತ್ತು ಈಗಲೇ ನಿನ್ನ ಹೃದಯದೊಳಗೆ ಬಂದು ವಾಸಿಸಬಲ್ಲನು! ನೀನು ಆತನೊಂದಿಗೆ ಯಾವಾಗಲೂ ಜೀವಿಸುವಿ.

ನೀನು ಈ ಸತ್ಯವನ್ನು ನಂಬುವದಾದರೆ, ದೇವರಿಗೆ ಈ ಮಾತುಗಳನ್ನು ಹೇಳು:
ಕರ್ತನಾದ ಯೇಸುವೇ, ನೀನು ದೇವರು ಆಗಿರುವಿ ಎಂದು ಮತ್ತು ನನ್ನ ಪಾಪಕ್ಕಾಗಿ ನಿನ್ನ ಪ್ರಾಣವನ್ನು ಕೊಡಲು ಮನುಷ್ಯನಾಗಿ ಬಂದಿರುವಿ ಎಂದು ನಂಬುತ್ತೇನೆ. ಈಗ ನೀನು ಸತ್ತವರೊಳಗಿಂದ ಎದ್ದು ಬಂದು ಯಾವಾಗಲೂ ಜೀವಿಸುವವನಾಗಿರುವಿ, ನನ್ನ ಪಾಪಗಳನ್ನು ದಯವಿಟ್ಟು ಕ್ಷಮಿಸಿ ನನ್ನ ಹೃದಯದೊಳಗೆ ಬಂದು ವಾಸಿಸು. ಹೀಗೆ ಹೊಸ ಜೀವವನ್ನು ಪಡೆದುಕೊಂಡು ಒಂದು ದಿನ ನಾನು ನಿನ್ನ ಬಳಿಗೆ ಬಂದು ನಿನ್ನೊಂದಿಗೆ ಯಾವಾಗಲೂ ಇರುವೆನು. ನಿನಗೆ ವಿಧೇಯನಾಗುವದಕ್ಕೆ ಮತ್ತು  ನಿನ್ನ ಮಗನಾಗಿ ಜೀವಿಸುವದಕ್ಕೆ ನನಗೆ ಸಹಾಯಮಾಡು. ಆಮೆನ್.

ನೀನು ಪ್ರತಿದಿನವೂ ಬೈಬಲ್ ಓದು ಮತ್ತು ಪ್ರಾರ್ಥನೆಯಲ್ಲಿ ದೇವರೊಂದಿಗೆ ಮಾತಾಡು!
ಯೋಹಾನ 3:16